ಕಾಳೀಹುಂಡಿ ಶಿವಕುಮಾರ್, ಮೈಸೂರು
*ಇಲ್ಲೊಬ್ಬ ನಿರುದ್ಯೋಗಿ ವಿದ್ಯಾರ್ಥಿ ಸನ್ಯಾಸಿಯಾಗುವುದೇ ಮೇಲು ಎನ್ನುತ್ತಾನಲ್ಲಾ?*




ಭೇಷ್! ಅವನಿಗೆ ಆರ್ಟ್ ಆಫ್ ಲಿವಿಂಗ್ ತಿಳಿದಿದೆಯೆಂದಾಯಿತು!

ಎನ್. ಪ್ರಕಾಶ, ದೇವನಹಳ್ಳಿ
*ಕೆಲಸ ಮಾಡುವವರಿಗೆ ದಿನದ 24 ಘಂಟೆಯೂ ಸಾಲದಂತೆ; ಸೋಮಾರಿಗಳಿಗೆ?*
ಪಾಪ; ಅವರಿಗೆ ಪ್ರತಿ ಗಳಿಗೆಯೂ ಒಂದು ದಿನದಷ್ಟು ದೀರ್ಘವಂತೆ!

ಕೀರ್ತಿ ವಿಜಯ್ ಜೈನ್, ಬೆಂಗಳೂರು
*ಹಳೆಯ ಕಾಲದ ದಮ್ಮಡಿಗೂ, ಈಗಿನ ಕಾಲದ ದುಡ್ಡಿಗೂ ಏನು ವ್ಯತ್ಯಾಸ ಗುರು?*
ದಮ್ಮಡಿಗೆ ರಾಜಮರ್ಯಾದೆ ಇತ್ತು; ದುಡ್ಡು ರಾಜಕಾರಣಿಯಷ್ಟೇ ಚಿಲ್ರೆ!

ಬಾ.ರಂ. ಸುರೇಶ್, ಶಿವಮೊಗ್ಗ
*ನನಗೆ ಪರಸ್ತ್ರೀಯರು ಕುರೂಪಿಗಳಾಗಿ ಕಾಣಿಸುತ್ತಾರಲ್ಲಾ...?*
ಕೈಗೆ ಸಿಗದ ದ್ರಾಕ್ಷಿ ಹುಳಿ!?

ಹೆಚ್.ಆರ್. ಕಡಿವಾಲ, ಬದಾಮಿ
*ದೇವನೊಬ್ಬ, ನಾಮ ಹಲವು....?*




ಆದರೆ ಹಣ ತೊಡಗಿಸಿ ಮೋಸಹೋದವರಿಗೆ ನಾಮ ಒಂದೇ, ಮೊರೆ ಹೋಗಲು ದೇವರುಗಳು ಹಲವು!

ಜಾ.ರು.ಆದಿನಾರಾಯಣಮುನಿ, ಬೆಂಗಳೂರು
*ಸಚಿವಸ್ಥಾನವನ್ನು ಬರೀ ಬ್ರಹ್ಮಚಾರಿಗಳಿಗೇ ಕೊಟ್ಟರೆ?*
ಐದು ವರ್ಷವೂ ಸೂಕ್ತ ಕನ್ಯೆಯನ್ನು ಹುಡುಕುವುದರಲ್ಲೇ ಕಳೆದುಬಿಡುತ್ತಾರೆ!

ಹಾಡ್ಯ ಜಯಾನಂದ, ಮೈಸೂರು
*ಈಗಿನ ಹುಡುಗಿಯರು ಐ-ಬೋರ್ಡ್‌ನಲ್ಲೇ ಓವರ್‌ಟೇಕ್ ಮಾಡುತ್ತಾರಲ್ಲಾ?*
ಎಲ್ ಬೋರ್ಡ್ ಅಲ್ಲವೇ, ಬ್ರೇಕ್ ಬದಲು ಆಕ್ಸಿಲರೇಟರ್ ಒತ್ತಿಬಿಡುತ್ತಾರೆ!

ಖಲಂದರ್ ಅಝೀಝ್ ಜಾವಗಲ್, ತಾವೂರು
*ಗುರು ಶಿಷ್ಯರನ್ನು ಮತ್ತು ಶಿಷ್ಯರು ಗುರುಗಳನ್ನು ಪ್ರೀತಿಸಬೇಕೋ, ಗೌರವಿಸಬೇಕೋ, ಬಯ್ಯಬೇಕೋ?*
ಈ ಪ್ರಶ್ನೆಗೆ ಉತ್ತರ ಶಿಷ್ಯ ಪಾಸಾಗಬೇಕೋ, ಫೇಲಾಗಬೇಕೋ ಎಂಬುದರ ಮೇಲೆ ಆಧಾರವಾಗಿದೆ!

ಗಣೇಶ ಎಂ. ಪೈ, ಬೆಂಗಳೂರು
*ಹಿಂದೆ ಕ್ಯಾಬರೆ ನರ್ತಕಿಯರು ಮಾಡುತ್ತಿದ್ದ ಅರೆನಗ್ನ ದೃಶ್ಯಗಳನ್ನು ಇಂದಿನ ನಾಯಕಿಯರೇ ನಿರ್ವಹಿಸುತ್ತಿದ್ದಾರೆ; ಆ ನರ್ತಕಿಯರ ಗತಿ?*
ಸೊಗದಿಂದ ಸೀರೆ ಧರಿಸಿ ಸೀರಿಯಲ್‌ಗಳಲ್ಲಿ ಸೀರಿಯಸ್ ಪಾತ್ರಗಳನ್ನು ಮಾಡುತ್ತಿದ್ದಾರೆ!

ರಾಜು ಎಸ್. ಗಾಲಿ, ಬೆಳಗಾವಿ
*ಗಣೇಶನ ಹಬ್ಬಕ್ಕೆ ಸರ್ಕಾರದ ಕೊಡುಗೆ ಏನು?*
ಗಣೇಶನನ್ನು ಎಲ್ಲೆಂದರಲ್ಲಿ ಮುಳುಗಿಸಲು ಬೇಕಾದಷ್ಟು ಹೊಂಡಗಳು!

ನೆ.ಸು. ಆನಂದ್, ಕತ್ತರಗುಪ್ಪ
*ಜೀವನವು ಹೊಸದರಲ್ಲಿ ಕಾವ್ಯರೂಪಕ, ಮಕ್ಕಳಾದಮೇಲೆ ಗದ್ಯರೂಪಕ, ವೃದ್ಧಾಪ್ಯದಲ್ಲಿ ವ್ಯಾಕರಣ ರೂಪಕವಂತೆ?*
ಅಲ್ಲ. ಮೊದಲು ಭಾಮಿನಿ ಷಟ್ಪದಿ, ನಂತರ ಉತ್ಸಾಹ ರಗಳೆ, ಕಡೆಗೆ ವಾರ್ಧಕ್ಯ shutಪದಿ!

ಗ್ರೆಗರಿ ಕ್ವಾಡ್ರಸ್, ಕಿನ್ನಿಗೋಳಿ
*ದೇವರಿಗಿಂತ ಶ್ರೇಷ್ಠ ಯಾರು? ಸೈತಾನನಿಗಿಂತ ದುಷ್ಟ ಯಾರು?*
ದೇವ/ಸೈತಾನನ ಭಕ್ತರು. ಅವರಿಲ್ಲದಿದ್ದರೆ ಇವರ ಗುಣಾವಗುಣಗಳು ತಿಳಿಯುತ್ತಲೇ ಇರಲಿಲ್ಲ!

ಪಿ.ಜೆ. ರಾಘವೇಂದ್ರ, ಮೈಸೂರು
*ಆನೆಗಳನ್ನು ಅಂಕುಶದಿಂದ ನಿಯಂತ್ರಿಸಬಹುದು, ಬಿಳಿಯಾನೆಗಳನ್ನು...?*
ರೆಸಾರ್ಟ್‌ನಲ್ಲಿ ಕಟ್ಟಿಹಾಕಿ ಮೇವು ಹಾಕುವುದರಿಂದ!

ಎಚ್. ಆನಂದಕುಮಾರ್, ಚಿತ್ರದುರ್ಗ
*ವೈಜ್ಞಾನಿಕತೆ ಮತ್ತು ವೈಚಾರಿಕತೆಯನ್ನು ಒಳಗೊಂಡ ನಿಜಧರ್ಮ ಯಾವುದು?*
ಪ್ರತಿ ಧರ್ಮವೂ ಇವೆರಡನ್ನೂ ಹೊಂದಿದೆ; ಆದರೆ ಕೆಲವು ಅರ್ಚಕರು, ಮೌಲ್ವಿಗಳು, ಪಾದ್ರಿಗಳು ಇದನ್ನು ಅರ್ಥ ಮಾಡಿಕೊಂಡಿರುವುದಿಲ್ಲ!

## ಬಹುಮಾನಿತ ಪ್ರಶ್ನೆ

ಎಂ.ಎಸ್. ಧರ್ಮೇಂದ್ರ, ಜಿಟಿಆರ್‌ಇ ಕ್ಯಾಂಪಸ್, ಬೆಂಗಳೂರು
*ಗೂಟಕ್ಕೆ ಕಟ್ಟುವ ಎಮ್ಮೆಗೂ, ಗೂಟದ ಕಾರಿನಲ್ಲಿ ಓಡಾಡುವ ಎಮ್ಮೆಲ್ಲೆಗೂ ಎತ್ತಣಿಂದೆತ್ತಣ ಸಂಬಂಧವಯ್ಯಾ?*
ಇಬ್ಬರಿಂದಲೂ ಟ್ರಾಫಿಕ್ ಜ್ಯಾಂ!

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು
*ಪ್ರಾಯಕ್ಕೆ ಬಂದ ಹುಡುಗನಿಗೆ ಚಿಗುರು ಮೀಸೆ, ಗಡ್ಡ ಬರುತ್ತೆ. ಪ್ರಾಯಕ್ಕೆ ಬಂದ ಹುಡುಗಿಗೆ?*
ಅವನನ್ನು ನೋಡಲು ನಾಚಿಕೆ ಅಡ್ಡ ಬರುತ್ತೆ!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಟೆನ್ನಿಸ್ ಆಟಗಾರ್ತಿಯರ ಉಡುಪು ಧರಿಸಿ ಹುಡುಗಿಯರು ಕಾಲೇಜಿಗೆ ಹೋದರೆ?*
ಲವ್ 30, ಲವ್ 40, ಲವ್ ಗೇಮ್‌ಗಳು ಹೆಚ್ಚಾಗುತ್ತವೆ!

ಆರ್. ಮಧುಸೂದನ್, ಹಾಸನ
*ಕಪಾಳಕ್ಕೆ ಹೊಡೆದ ಹುಡುಗಿಯನ್ನೇ ಮದುವೆ ಆಗುವೆನೆಂದು ಹುಡುಗರು ಹಠ ಹಿಡಿಯುವುದೇಕೆ?*



ಕಪಾಳಕ್ಕೆ ಕೈ ಇಟ್ಟವಳು ಮೋಕ್ಷಕ್ಕೂ ದಾರಿ ತೋರಿಸಹುದೆಂದು!

ಡಿ. ಯೋಗೇಶ್, ಚಳ್ಳಕೆರೆ
*ಕುಡುಕ ಅವನ ಪಾಡಿಗೆ ಮೋರಿಯಲ್ಲಿ ಬಿದ್ದಿದ್ದರೂ ಜನ ಅವನ ಬಗ್ಗೆ ಆಡಿಕೊಳ್ಳುವುದೇಕೆ?*
ಯಾವುದು ಹೆಚ್ಚು ವಾಸನೆ– ಮೋರಿಯೋ, ಮೋರೆಯೋ ಎಂದು ಚರ್ಚಿಸಲು!

ನೇ.ಗೋ.ಭ, ಕುಕ್ಕೆ ಸುಬ್ರಹ್ಮಣ್ಯ
*ಇಡೀ ಕೋಸಲದೇಶದ ಪ್ರಜೆಗಳ ಮಾತಿಗಿಂತಲೂ ಒಬ್ಬ ಕೈಕೇಯಿಯ ಮಾತೇ ರಾಮನಿಗೆ ಹೆಚ್ಚು ಮೌಲಿಕವಾದದ್ದು ಹೇಗೆ ರಾಮ್‌ಜೀ?*
ಇಂದಿನ ಪ್ರಧಾನಿಯಂತೆ ಅಂದಿನ ರಾಜರೂ ಹೈಕಮಾಂಡ್ ಅಧೀನರೇ; ಕೈಕೇಯಿ ತ್ರೇತಾಯುಗದ ಹೈಕಮಾಂಡ್!

■ ರಾಮ್